# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೇಲೂರು.

## ಸಿ.ಸಿ. ನಂ- 608/2021

**ಪಿರ್ಯಾದಿ ः- ಎಂ ಆರ್ ರವಿ**

**-ವಿರುದ್ಧ -**

**ಆರೋಪಿ ः- ಎಲ್ ಪಿ ಗುರುಸಿದ್ದಪ್ಪ**

**ःःದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ಅಡಿಯಲ್ಲಿ ಆರೋಪಿ ಹೇಳಿಕೆःः**

**ಆರೋಪಿ ಹೆಸರುः ಎಲ್ ಪಿ ಗುರುಸಿದ್ದಪ್ಪ ಬಿನ್ ಪುಪ್ಪೇಗೌಡ , 50 ವರ್ಷ, ಶಿಕ್ಷಕರು , ಸ.ಕಿ.ಪ್ರಾ. ಪಾಠಶಾಲೆ, ಕಲ್ಲುಶೆಟ್ಟಿಹಳ್ಳಿ ಗ್ರಾಮ, ಮಾದೀಹಳ್ಳಿ ಹೋಬಳಿ, ಮುಗಳವಳ್ಳಿ ಪೋಸ್ಟ , ಬೇಲೂರು ತಾ.**

ಪ್ರಶ್ನೆः1-ಅಭಿಯೋಗದ ಪರ ವಿಚಾರಣೆಯಾಗಿರುವ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿ ತಿಳಿದಿರುವಿರಾ?

ಉತ್ತರः

**ಪ್ರಶ್ನೆ-2 ಅಸಾ-1 ಇವರು ತಮ್ಮ** ಸಾಕ್ಷ್ಯದಲ್ಲಿ ಆರೋಪಿಯು ಹಾಗೂ ತಾನು ಪರಿಚಯಸ್ಥರಾಗಿದ್ದು, ಆರೋಪಿಯು ದಿः07-01-2019 ರಂದು ನನ್ನ ಬಳಿ ಬಂದು ತನ್ನ ಜಮೀನಿನಲ್ಲಿ ಅಡಿಕೆ ಮತ್ತು ಶುಂಠಿ ಬೆಳೆ ಮಾಡಲು ಬಂಡವಾಳ ಹೂಡವ ಉದ್ದೇಶದಿಂದ ಹಾಗೂ ತನ್ನ ಸಂಸಾರಕ್ಕಾಗಿ ಮಾಡಿರುವ ಕೈಸಾಲ ತೀರಿಸುವ ಉದ್ದೇಶದಿಂದ ರೂ.5,00,000-00 ಹಣದ ಅವಶ್ಯಕತೆ ಇದೆ ಕೊಡಿ ಎಂದು ಕೇಳಿದಾಗ ಅವರ ಕೋರಿಕೆಯನ್ನು ಮನ್ನಿಸಿ, ಅದೇ ದಿನದಂದು ರೂ.5,00,000-00 ಗಳನ್ನು ಆರೋಪಿಗೆ ನಗದಾಗಿ ನೀಡಿರುವುದಾಗಿ ನುಡಿದಿರುತ್ತಾರೆ. ಅದಕ್ಕೆ ನಿಮ್ಮ ಉತ್ತರ ಏನು?

ಉತ್ತರः

**ಪ್ರಶ್ನೆ-3** ಸದರಿ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ತಾನು ಹಲವಾರು ಬಾರಿ ಆರೋಪಿಯನ್ನು ಬೇಟಿ ಮಾಡಿ ಸದರಿ ಹಣವನ್ನು ಕಳಿಸಿದ್ದು ನೀವು ಆಗ ಕೊಡುತ್ತೇನೆ ಈಗ ಕೊಡುತ್ತೇನೆ ಎಂದು ಹೇಳಿ ಕಾಲಹರಣ ಮಾಡಿದ್ದು ನಂತರ ಆರೋಪಿಯಾದ ನೀವು ಸದರಿ ಹಣದ ಮರುಪಾವತಿಗಾಗಿ ನೀವು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬೇಲೂರು ಶಾಖೆಯ ಚೆಕ್ ನಂः 572082 ರಲ್ಲಿ ರೂ.5,00,000-00 ಗಳನ್ನು ಹಾಗೂ ಮುಂಗಡ ದಿನಾಂಕः 28-12-2020 ಎಂದು ನಮೂದಿಸಿ, ಅದರ ಮೇಲೆ ಸಹಿ ಮಾಡಿ, ಸದರಿ ದಿನಾಂಕದಂದು ಅಥವಾ ನಂತರ ಮೇಲ್ಕಂಡ ಬ್ಯಾಂಕ್ ಗೆ ಹಾಜರುಪಡಿಸಿ ಹಣ ಪಡೆದುಕೊಳ್ಳುವಂತೆ ತಿಳಿಸಿ, ಚೆಕ್ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನಿಮ್ಮ ಉತ್ತರ ಏನು?

ಉತ್ತರः

**ಪ್ರಶ್ನೆ-4** ಸದರಿ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ದಿಃ 05-01-2021 ರಂದು ತಾನು ಖಾತೆ ಹೊಂದಿರುವ ಕಾರ್ಪೋರೇಷನ್ ಬ್ಯಾಂಕ್, ಬೇಲೂರು ಶಾಖೆಯ ಬ್ಯಾಂಕ್ ಮೂಲಕ ಆರೋಪಿಯ ಬ್ಯಾಂಕ್‌ಗೆ ಚೆಕ್ ಅನ್ನು ನಗದೀಕರಣಕ್ಕಾಗಿ ಹಾಜರುಪಡಿಸಿದ್ದು, ಸದರಿ ಬ್ಯಾಂಕ್ ನವರು ಸದರಿ ಚೆಕ್ ನ್ನು ಪರಿಶೀಲಿಸಿ ಆರೋಪಿಯ ಖಾತೆಯಲ್ಲಿ ಫಂಡ್ಸ್ ಇನ್ ಸಫಿಷಿಯೆಂಟ್ (ಸಾಕಷ್ಟು ಹಣವಿಲ್ಲ) ಎಂಬ ಕಾರಣವನ್ನು ನೀಡಿ, ಆರೋಪಿಯ ಚೆಕ್ ನಗದಾಗಿಸಲು ಸಾಧ್ಯವಿಲ್ಲವೆಂದು ಹಿಂಬರಹ ನೀಡಿ ದಿಃ05.01.2021 ರಂದು ವಾಪಸ್ಸು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

**ಪ್ರಶ್ನೆ-5** ಸದರಿ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ತಮ್ಮ ವಕೀಲರ ಮೂಲಕ ದಿಃ 12-01-2021 ರಂದು ಆರೋಪಿಗೆ ನೋಂದಾಯಿತ ಅಂಚೆ ಮೂಲಕ ನೋಟೀಸ್ ನೀಡಿ, ಸದರಿ ಸಾಲದ ಹಣವನ್ನು ಮರು ಪಾವತಿಸುವಂತೆ ತಗಾದೆ ಮಾಡಿದ್ದು, ಸದರಿ ನೋಟೀಸ್ ದಿಃ21-01-2021 ರಂದು ಆರೋಪಿಗೆ ಜಾರಿಯಾಗಿರುತ್ತದೆ. ಸದರಿ ತಿಳುವಳಿಕೆ ಪತ್ರ ಜಾರಿಯಾದ ನಂತರ ಆರೋಪಿಯು ದಿಃ01.02.2021 ರಂದು ತಮ್ಮ ವಕೀಲರ ಮೂಲಕ ಸುಳ್ಳು ಅಂಶಗಳನ್ನು ಸೃಷ್ಟಿಸಿಕೊಂಡು ಮರು ಉತ್ತರ ನೀಡಿರುತ್ತಾರೆ. ಸದರಿ ನೋಟೀಸಿನ ವಿಚಾರ ಗೊತ್ತಿದ್ದರೂ ಸಹ ಪಿರ್ಯಾದಿಗೆ ಹಣವನ್ನು ಮರು ಪಾವತಿಸದೇ ಆರೋಪಿಯಾದ ನೀನು ಸಾಲ ಮರುಪಾವತಿಗಾಗಿ ನೀಡಿದ ಚೆಕ್ ಅಮಾನ್ಯಗೊಳ್ಳುವಂತೆ ಮಾಡಿ, ಪಿರ್ಯಾದಿಗೆ ವಂಚಿಸಿ ಮೋಸಗೊಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ6 ನಿಮ್ಮ ಪರ ಪರೀಕ್ಷಿಸುವ ಸಾಕ್ಷಿದಾರರು ಇದ್ದಾರೆಯೆ?

ಉತ್ತರಃ

ಪ್ರಶ್ನೆಃ7 ನೀವು ಹೇಳುವುದು ಏನಾದರೂ ಇದೆಯೇ?

ಉತ್ತರಃ

(ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದಿನಾಂಕಃ 12-01-2024 ರಂದು ಓದಿ ಹೇಳಿ ಅವರಿಂದ ಬಂದ ಉತ್ತರವನ್ನು ಯಥವತ್ತಾಗಿ ಸ್ವಹಸ್ತಾಕ್ಷರದಿಂದ ದಾಖಲು ಮಾಡಿಕೊಳ್ಳಲಾಯಿತೆಂದು ದೃಢೀಕರಿಸಲಾಗಿದೆ)

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ಬೇಲೂರು.**